ಚಂದ್ರಗುಪ್ತನ ಮಂತ್ರಿಯಾಗಿ ರಾಜ್ಯವನ್ನು ಕಾಪಾಡಲು ಒಪ್ಪಿಸಿ ತಾನು ತನ್ನ ತಪಸ್ಸಿಗೆ (ಅಧ್ಯಯನಾರ್ಥವಾಗಿ) ಹೊರಟುಹೋಗುತ್ತಾನೆ.

ಮೈಸೂರಿನಲ್ಲಿ ಆಗ ಅಂತಹದೇ ಸನ್ನಿವೇಶವೊಂದು ಸೃಷ್ಟಿಯಾಗಿತ್ತು. ಮೈಸೂರಿನ ಪಾರಂಪರಿಕ ಒಡೆಯರ್ ಅರಸರ ದಂಡನಾಯಕರಾದ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಅವರನ್ನು ಗೃಹಬಂಧನದಲ್ಲಿ ಎಂಬಂತೆ ಇರಿಸಿ ರಾಜ್ಯವಾಳುತ್ತಿದ್ದರು. 1799 ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಟಿಪ್ಪುಸುಲ್ತಾನರನ್ನು ಕೊಂದು ಮೈಸೂರು ರಾಜ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಹಿಂದಿನ ಒಡೆಯರ್ ವಂಶದ ಕುಡಿಯಾದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಸಿಂಹಾಸನದಲ್ಲಿರಿಸಿ, ದಿವಾನ್ ಪೂರ್ಣಯ್ಯನವರನ್ನು ಒಡೆಯರ್ ವಂಶಕ್ಕೂ ದಿವಾನರಾಗಿರುವಂತೆ ಒಪ್ಪಿಸಿ, ಅವರಿಂದ ಬಾಲಕನಾದ ರಾಜನು ರಾಜನೀತಿಯನ್ನು ಕಲಿತುಕೊಳ್ಳುವಂತೆ ಏರ್ಪಡಿಸಿ, ತಮಗೆ ಬರಬೇಕಾದ ವಾರ್ಷಿಕ ಕಪ್ಪವನ್ನು ಪೂರ್ಣಯ್ಯನವರು ಸಲ್ಲಿಸುವಂತೆ ವ್ಯವಸ್ಥೆ ಮಾಡಿ ತಾವು ಪರೋಕ್ಷವಾಗಿ ಆಳತೊಡಗಿದರು. ಈ ಸಂದರ್ಭದಲ್ಲಿ ಕೃತಿ ರಚನೆಯಾಯಿತು.




1831 ರಿಂದ 1881 ರವರೆಗೆ ಬ್ರಿಟಿಷರು ಒಡೆಯರಿಂದ ಅಧಿಕಾರವನ್ನು ಕಿತ್ತುಕೊಂಡು ಕಮಿಷನರುಗಳ ಮೂಲಕ ಆಳ್ವಿಕೆಯನ್ನು ನೇರವಾಗಿ ಮಾಡಿದರು. ನಂತರ ರಾಜರ ಉತ್ತರಾಧಿಕಾರಿಗೆ ಅಧಿಕಾರವನ್ನು ಮತ್ತೆ ಹಸ್ತಾಂತರಿಸಲು ಏರ್ಪಾಡು ಮಾಡಿದರು. ಆಗ ಈ ಕೃತಿ ಮುದ್ರಣವಾಯಿತು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನರಿಗೆ ಮಂತ್ರಿಯಾಗಿ ರಾಜ್ಯವನ್ನು ನಡೆಸುತ್ತಿದ್ದ ದಿವಾನ್ ಪೂರ್ಣಯ್ಯನವರನ್ನು ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿಯೂ ಮಂತ್ರಿಯಾಗಿ ಮುಂದುವರಿಯಬೇಕೆಂದು ಬ್ರಿಟಿಷರು ಒಪ್ಪಿಸುತ್ತಾರೆ. ಓದುಗರಿಗೆ ಅಮಾತ್ಯ ರಾಕ್ಷಸನಿಗೂ, ದಿವಾನ್ ಪೂರ್ಣಯ್ಯನವರಿಗೂ ಏನಾದರೂ ಹೋಲಿಕೆ ಕಂಡಿತೆ? ಅದೇ ರೀತಿ ಉಳಿದವನ್ನೂ ಹೋಲಿಸಲು ಪ್ರಯತ್ನಿಸಿದರೆ ಈ ಕೃತಿಯನ್ನು ಬೇರೆಯೇ ಬೆಳಕಿನಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಚಾಣಕ್ಯನಂತೆ ಬ್ರಿಟಿಷರು ತಾವೂ ಏನೊಂದೂ ಅಭಿಲಾಷೆಯಿಲ್ಲದೆ ದೂರ ನಡೆದುಬಿಟ್ಟರು ಎಂಬ ಅಭಿಪ್ರಾಯ 'ಮುದ್ರಾಮಂಜೂಷ'ದ ಓದಿನಿಂದ ಬರಲೆಂಬ ಯೋಚನೆ ಈ ಕೃತಿ ರಚನೆಯನ್ನು ಮಾಡಿದ ಲೇಖಕನಿಗಾಗಲಿ, ಬ್ರಿಟಿಷರಿಗಾಗಲಿ ಇತ್ತೇ? ಯೋಚಿಸಬೇಕಾದ ವಿಷಯ.

ಇದರ ಪ್ರಕಟಣೆಗೆ ಅಷ್ಟು ಕಾಲ ಯಾಕೆ ವಿಳಂಬವಾಯಿತು? ಲೇಖಕನು ಕೃತಿಯಲ್ಲಿ ಕೃಷ್ಣರಾಜ ಒಡೆಯರನ್ನು ಸ್ತುತಿಸಿ, ಮಂಗಲಾಚರಣೆಯಲ್ಲಿ ಗೌರವಿಸಿದ್ದರೂ ಅದನ್ನು ರಾಜರು ಪ್ರಕಟಿಸದೆ ವೆಸ್ಲಿಯನ್ ಪಾದ್ರಿಗಳು ಯಾಕೆ ಪ್ರಕಟಿಸಿದರು? ಇಂತಹ ಪ್ರಶ್ನೆಗಳು ಉಳಿದಿವೆ. ಸುಮಾರು 1842ರಿಂದ ಮೈಸೂರು ಅರಮನೆಯಲ್ಲಿ ಕಲ್ಲಚ್ಚಿನ ಮುದ್ರಣ ಯಂತ್ರವನ್ನು ಸ್ಥಾಪಿಸಿ ಒಡೆಯರ್ ಅವರಿಗೆ ಪ್ರಿಯವಾಗಿದ್ದ ಗ್ರಂಥಗಳನ್ನು ಮುದ್ರಿಸಲಾಗುತ್ತಿತ್ತು. ಮುದ್ರಾಮಂಜೂಷದ ಬಗ್ಗೆ ಅವರಿಗೆ ಅಷ್ಟು ಆಸಕ್ತಿಯಿರಲಿಲ್ಲ, ಅಥವಾ ಮುದ್ರಣಕ್ಕೆ ಕಾದಿದ್ದ ಅವರದೇ ಗ್ರಂಥಗಳ ಯಾದಿ ದೊಡ್ಡದಾಗಿದ್ದುದರಿಂದ ನಾರಾಯಣ ಶಾಸ್ತ್ರಿಗಳ ಕೃತಿಯ ಮುದ್ರಣ ತಡವಾಯಿತು – ಎಂದು ಊಹಿಸಬಹುದು. ಒಡೆಯರ್ ಅವರ ಅಪ್ರಕಟಿತ ಗ್ರಂಥಗಳನ್ನೇ ಅವರ ಪುತ್ರ 1881ರ ನಂತರ ಮುದ್ರಿಸಿದ್ದೂ ಇದೆ. ಹಾಗಾಗಿ ಇದೊಂದು ಕುತೂಹಲದ ಪ್ರಶ್ನೆ ಉಳಿಯುತ್ತದೆ.

ಸದ್ಯದ ನಮ್ಮ ಚರ್ಚೆಗೆ ಬೇಕಾದುದೆಂದರೆ – ಈ ಕೃತಿಯನ್ನು ಬರೆದಾಗ ಕೃಷ್ಣರಾಜ ಒಡೆಯರಿಗೆ ಅಧಿಕಾರವಿತ್ತು; ಅವರೇ ಅದನ್ನು ಪ್ರಕಟಿಸಬಹುದಿತ್ತು. ಆದರೆ, ಅವರನ್ನು ಕಿತ್ತುಹಾಕಲು ವೇದಿಕೆ ಸಿದ್ಧಪಡಿಸುತ್ತಿದ್ದ ಬ್ರಿಟಿಷರು ಅಥವಾ ಸ್ವತಃ ಒಡೆಯರು ಅಥವಾ ಗ್ರಂಥಕರ್ತ- ಈ ಕೃತಿಯನ್ನು ಪ್ರಕಟಿಸಲಿಲ್ಲ.